ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 26-01-1995.

# *ಬ್ರಹ್ಮಾತಂದೆಯ ಇನ್ನೆರಡು ಹೆಜ್ಜೆಗಳು ಆದೇಶಪಾಲಕ ಮತ್ತು ವಿಧೇಯತೆ.*

(ब्रह्मा बाप के और दो कदम - फरमानबरदार- वफादार)

ಇಂದು ಬಾಪ್‌ದಾದಾರವರು ನಾಲ್ಕಾರು ಕಡೆಯಲ್ಲಿರುವ ಸ್ನೇಹಿ ಹಾಗೂ ಸಹಯೋಗಿ ಮಕ್ಕಳನ್ನು ಹಾಗೂ ಶಕ್ತಿಶಾಲಿ ಸಮಾನ ಮಕ್ಕಳನ್ನು ನೋಡುತ್ತಿದ್ದಾರೆ. ಸ್ನೇಹಿಯಂತೂ ಎಲ್ಲರೂ ಆಗಿದ್ದಾರೆ ಆದರೆ ಶಕ್ತಿಶಾಲಿಯಾಗಿ ಯಥಾಶಕ್ತಿ ಇದ್ದಾರೆ. ಸ್ನೇಹಿ ಮಕ್ಕಳಿಗೆ ಸ್ನೇಹಕ್ಕೆ ಫಲಿತವಾಗಿ ಕೋಟಿಪಟ್ಟು ಸ್ನೇಹ ಮತ್ತು ಸಹಯೋಗ ಪ್ರಾಪ್ತಿಯಾಗುತ್ತದೆ ಶಕ್ತಿಶಾಲಿ ಸಮಾನ ಮಕ್ಕಳಿಗೆ ಸದಾ ವಿಜಯಿ ಭವ! ಎಂಬ ವರದಾನ ಲಭಿಸುತ್ತದೆ. ಎಲ್ಲರಿಗೂ ಲಭಿಸುತ್ತದೆ ಆದರೆ ಸ್ನೇಹಿ ಮಕ್ಕಳು ಶಕ್ತಿಯನ್ನು ಅನುಸರಿಸಿ ಶಕ್ತಿಶಾಲಿ ಆಗಿರುತ್ತಾರೆ ಆದ್ದರಿಂದ ಸದಾ ಸಹಜವಾಗಿ ವಿಜಯವನ್ನು ಅನುಭವ ಮಾಡಿಕೊಳ್ಳಲಾಗುವುದಿಲ್ಲ. ಕೆಲವೊಮ್ಮೆ ಸಹಜ, ಕೆಲವೊಮ್ಮೆ ಪರಿಶ್ರಮವೆನಿಸುತ್ತದೆ. ಇಂತಹ ಸ್ನೇಹಿ ಮಕ್ಕಳ ಪರಿಶ್ರಮವನ್ನೂ ಸಹ ಬಾಪ್‌ದಾದಾರವರು ಸಹಜ ಮಾಡುವ ಸಹಯೋಗವನ್ನು ಕೊಡುತ್ತಾರೆ ಏಕೆಂದರೆ ಸ್ನೇಹಿ ಮಕ್ಕಳು ಸಹಯೋಗಿಗಳಾಗಿಯೂ ಇರುತ್ತಾರೆ. ಹಾಗಾದರೆ ಸಹಯೋಗದ ರಿಟರ್ನ್ ನಲ್ಲಿ ಬಾಪ್‌ದಾದಾರವರು ಖಂಡಿತವಾಗಿ ಸಹಯೋಗವನ್ನು ಕೊಡುತ್ತಾರೆ ಆದರೆ ಯಥಾರ್ಥ ಯೋಗವಿರದೇ ಇರುವ ಕಾರಣದಿಂದ ಸಹಯೋಗ ಸಿಗುತ್ತಿದ್ದರೂ ಪ್ರಾಪ್ತಿಯ ಅನುಭೂತಿ ಮಾಡುವುದಕ್ಕೆ ಆಗುವುದಿಲ್ಲ. ಯೋಗದ ಮೂಲಕವೇ ಸಹಯೋಗದ ಅನುಭೂತಿಯಾಗುವುದು ಹಾಗೂ ಶಕ್ತಿಶಾಲಿ ಸಮಾನವಿರುವ ಮಕ್ಕಳು ಸದಾ ಯೋಗಯುಕ್ತವಾಗಿ ಇರುತ್ತಾರೆ ಆದ್ದರಿಂದಲೇ ಸಹಯೋಗದ ಅನುಭವ ಮಾಡುತ್ತಾ ಸಹಜ ವಿಜಯಗಳಾಗಿಬಿಡುತ್ತಾರೆ. ಆದರೆ ತಂದೆಗೆ ಎರಡೂ ಪ್ರಕಾರದ ಮಕ್ಕಳು ಪ್ರಿಯವಾಗಿರುತ್ತಾರೆ. ಪ್ರೀತಿ ಹಾಗೂ ಸದಾ ವಿಜಯಿಯಾಗಿರುವ ಶುಭ ಇಚ್ಛೆಯಂತು ಎಲ್ಲಾ ಮಕ್ಕಳಲ್ಲಿಯೂ ಇರುತ್ತದೆ ಆದರೆ ಶಕ್ತಿಯು ಕಡಿಮೆಯಿರುವ ಕಾರಣದಿಂದ ಸಮಯಕ್ಕೆ ಹಾಗೂ ಸರ್ವಶಕ್ತಿಗಳನ್ನು ಕಾರ್ಯದಲ್ಲಿ ಉಪಯೋಗಿಸಲು ಸಾಧ್ಯವಾಗುವುದಿಲ್ಲ. ತಂದೆಯು ವಾರಸತ್ವದ ಅಧಿಕಾರದಲ್ಲಿ ಸರ್ವಶಕ್ತಿಗಳ ಅಧಿಕಾರವನ್ನು ಎಲ್ಲಾ ಮಕ್ಕಳಿಗೂ ಕೊಡುತ್ತಾರೆ. ಅಧಿಕಾರವನ್ನು ಕೊಡುವುದರಲ್ಲಿ ಬಾಪ್‌ದಾದಾರವರು ಅಂತರವನ್ನಿಡುವುದಿಲ್ಲ. ಎಲ್ಲರನ್ನೂ ಸಂಪೂರ್ಣ ಅಧಿಕಾರಿಯನ್ನಾಗಿ ಮಾಡುತ್ತಾರೆ ಆದರೆ ಅದನ್ನು ತೆಗೆದುಕೊಳ್ಳುವುದರಲ್ಲಿ ನಂಬರ್‌ವಾರ್ ಆಗಿಬಿಡುತ್ತಾರೆ. ಬಾಪ್‌ದಾದಾರವರು ಕೆಲವರಿಗೆ ವಿಶೇಷ. ಕೆಲವರಿಗೆ ವಿಶೇಷವಾದ ಕ್ಲಾಸನ್ನು ತೆಗೆದುಕೊಳ್ಳುತ್ತಾರೆಯೇ? ವಿದ್ಯಾಭ್ಯಾಸವೂ ಸರ್ವರಿಗೂ ಒಂದೇ, ಪಾಲನೆಯೂ ಸಹ ಎಲ್ಲರಿಗೂ ಒಂದೇ ಆಗಿರುತ್ತದೆ. ಪಾಂಡವರಿಗೆ ಬೇರೆ ಪಾಲನೆಯಾಗಿದ್ದು, ಶಕ್ತಿಯರಿಗೆ ಬೇರೆ ಪಾಲನೆಯನ್ನು ಕೊಡುತ್ತಿದ್ದಾರೆಯೇ? ಸರ್ವರಿಗೂ ಒಂದೇ ಪಾಲನೆ ಹಾಗೂ ಒಂದೇ ವಿದ್ಯಾಭ್ಯಾಸವಿದೆ ಆದರೆ ಅದನ್ನು ಸ್ವೀಕರಿಸುವುದರಲ್ಲಿ ಹಾಗೂ

ಫಲಿತಾಂಶದಲ್ಲಿ ಎಷ್ಟೊಂದು ಅಂತರವಾಗಿಬಿಡುತ್ತದೆ! 8 ಅರ್ಥಾತ್ ಅಷ್ಟರತ್ನಗಳಲ್ಲಿ ಮತ್ತು 16,108 ರತ್ನಗಳಲ್ಲಿ- ಎಷ್ಟೊಂದು ಅಂತರವಿದೆ! ಈ ಅಂತರವೇಕೆ ಆಗುವುದು? ವಿದ್ಯಾಭ್ಯಾಸ ಹಾಗೂ ಪಾಲನೆ, ವರದಾನವನ್ನು ಧಾರಣೆ ಮಾಡಿಕೊಳ್ಳುವುದು ಹಾಗೂ ಕಾರ್ಯದಲ್ಲಿ ಉಪಯೋಗ ಮಾಡುವುದರಲ್ಲಿ ಅಂತರವಾಗಿಬಿಡುತ್ತದೆ. ಹಲವು ಮಕ್ಕಳು ಧಾರಣೆಯನ್ನೂ ಮಾಡಿಕೊಳ್ಳುತ್ತಾರೆ ಆದರೆ ಸಮಯಕ್ಕೆ ಕಾರ್ಯದಲ್ಲಿ ಉಪಯೋಗ ಮಾಡುವುದು ಬರುವುದಿಲ್ಲ. ಬುದ್ಧಿಯವರೆಗೂ ಬಹಳ ಸಂಪನ್ನವಾಗಿರುತ್ತಾರೆ ಆದರೆ ಕರ್ಮದಲ್ಲಿ ಉಪಯೋಗಿಸುವುದರಲ್ಲಿ ಅಂತರವಾಗಿಬಿಡುತ್ತದೆ.

ಬ್ರಹ್ಮಾ ತಂದೆಯವರೇಕೆ ನಂಬರ್‌ವನ್ ಆದರು? ಎರಡು ಹೆಜ್ಜೆಗಳನ್ನು ಮುಂಚೆಯೇ ತಿಳಿಸಿದ್ದೆವಲ್ಲವೆ. ಮೂರನೆಯ ಹೆಜ್ಜೆ- ಸದಾ ತಂದೆ, ಶಿಕ್ಷಕ ಹಾಗೂ ಸದ್ಗುರುವಿನ ಆದೇಶ ಪಾಲಕನಾದರು. ಪ್ರತೀ ಆದೇಶದಲ್ಲಿ ಆಯಿತು ಎಂದು ಮಾಡಿದರು. ತಂದೆಯ ಆದೇಶವಿದೆ- ಸದಾ ಸರ್ವ ಖಜಾನೆಗಳ ಆಸ್ತಿಯಲ್ಲಿ ಸಂಪನ್ನರಾಗುವುದು ಹಾಗೂ ಅನ್ಯರನ್ನೂ ಮಾಡುವುದು. ಹಾಗಾದರೆ ಪ್ರತ್ಯಕ್ಷದಲ್ಲಿ ನೋಡಿದಿರಿ- ಮೊದಲ ದಿನದಿಂದ ಅಂತಿಮ ದಿನದವರೆಗೂ ಸರ್ವ ಖಜಾನೆಗಳಾದ ಜ್ಞಾನ, ಶಕ್ತಿಗಳು, ಗುಣಗಳು, ಶ್ರೇಷ್ಠ ಸಮಯ, ಶ್ರೇಷ್ಠ ಸಂಕಲ್ಪಗಳ ಖಜಾನೆಯನ್ನು ಕಾರ್ಯದಲ್ಲಿ ಉಪಯೋಗಿಸಿದರು. ಅಂತಿಮ ದಿನವೂ ಸಹ ಸಮಯ, ಸಂಕಲ್ಪವನ್ನು ಮಕ್ಕಳಿಗಾಗಿ ಉಪಯೋಗಿಸಿದರು. ಜ್ಞಾನ ಖಜಾನೆ, ಸ್ಮೃತಿ ಶಕ್ತಿ ಹಾಗೂ ಸಹನಶೀಲನತೆಯ ಗುಣದ ಸ್ವರೂಪ ಎಲ್ಲಾ ಖಜಾನೆಗಳನ್ನು ಅಂತಿಮ ಸಮಯದವರೆಗೂ, ಶರೀರವನ್ನೂ ಮರೆತು ಸೇವೆಯಲ್ಲಿ ಪ್ರತ್ಯಕ್ಷವಾಗಿ ಉಪಯೋಗ ಮಾಡಿ ತೋರಿಸಿದರು. ಇದಕ್ಕೆ ನಂಬರ್‌ವನ್ ಆದೇಶಪಾಲಕ ಮಗು ಎಂದು ಹೇಳಲಾಗುತ್ತದೆ. ಏಕೆಂದರೆ ತಂದೆಯ ವಿಶೇಷ ಆದೇಶವೇನೆಂದರೆ- ಸ್ಮೃತಿ ಮತ್ತು ಸೇವೆಯಲ್ಲಿ ಸದಾ ತಂದೆಯ ಸಮಾನರಾಗಿರಿ ಎನ್ನುವುದೇ ಆಗಿದೆ. ಅಂದಮೇಲೆ ಆದಿಯಿಂದ ಅಂತಿಮ ಕ್ಷಣದವರೆಗೂ ಎರಡೂ ಆದೇಶಗಳನ್ನು ಪ್ರತ್ಯಕ್ಷದಲ್ಲಿ ನೋಡಿದಿರಲ್ಲವೇ? ಸ್ನೇಹದ ಗುರುತು ತಂದೆಯವರು ತಿಳಿಸಿರುವುದನ್ನು ಅನುಸರಿಸುವುದಾಗಿದೆ. ಹಾಗಾದರೆ ಆದಿಯಿಂದ ಅಂತ್ಯದವರೆಗೂ ಸರ್ವ ಖಜಾನೆಗಳನ್ನು ಸ್ವಯಂಗಾಗಿ ಮತ್ತು ಸೇವೆಯಲ್ಲಿ ಉಪಯೋಗಿಸಿದ್ದೀರಾ ಎಂದು ಪರಿಶೀಲನೆ ಮಾಡಿಕೊಳ್ಳಿರಿ. ತಂದೆಯ ಆಜ್ಞೆ ಏನೆಂದರೆ ಪ್ರತಿಯೊಂದು ಶ್ವಾಸ, ಸಂಕಲ್ಪ, ಕ್ಷಣ ಕೂಡ ವ್ಯರ್ಥವಾಗಬಾರದು ಎಂದು. ಹಾಗಾದರೆ ದಿನವಿಡೀ ಈ ಆಜ್ಞೆಯನ್ನು ಪ್ರತ್ಯಕ್ಷದಲ್ಲಿ ಎಷ್ಟರವರೆಗೆ ತಂದಿದ್ದೀರಿ? ಅಥವಾ ಆಗಾಗ ತಂದು ಆಗಾಗ ಪ್ರತ್ಯಕ್ಷದಲ್ಲಿ ತರದೆ ಇರುತ್ತಿಲ್ಲ ತಾನೇ? ಒಮ್ಮೊಮ್ಮೆ ಆಜ್ಞಾಕಾರಿಯಾಗಿ ಒಮ್ಮೊಮ್ಮೆ ಆಗದಿದ್ದರೆ ಯಾವ ಪಟ್ಟಿಯಲ್ಲಿ ಹೋಗುತ್ತೀರಿ? ಬಾಪ್‌ದಾದಾ ಆಜ್ಞಾಕಾರಿಗಳ ಪಟ್ಟಿಯನ್ನು ತೆಗೆದರೆ ನೀವು ಯಾವ ಪಟ್ಟಿಯಲ್ಲಿರುತ್ತೀರಿ? ನಿಮ್ಮ ಬಗ್ಗೆ ನಿಮಗಂತೂ ತಿಳಿದಿದೆಯಲ್ಲವೇ ಏಕೆಂದರೆ ನೀವೆಲ್ಲರೂ ಸರ್ವಖಜಾನೆಗಳಿಗೆ ನಿಮಿತ್ತರು, ಯಜಮಾನರು. ಒಂದು ಸಂಕಲ್ಪ ಕೂಡ ತಂದೆಯ ಆಜ್ಞೆ ಇಲ್ಲದೆ ಉಪಯೋಗಿಸುತ್ತಿಲ್ಲವೇ ಅಥವಾ ನಾವು ತಂದೆಗೆ ಮಕ್ಕಳು ಮತ್ತು ಯಜಮಾನರು ಆದ್ದರಿಂದ ವ್ಯರ್ಥವಾಗಿ ಕಳೆದರೂ, ಏನು ಮಾಡಿದರೂ ಅದರಲ್ಲಿ ತಂದೆಗೇನಿದೆ, ಎಂದು ಯೋಚಿಸುತ್ತಿದ್ದೀರಾ? ತಂದೆಯಂತೂ ಕೊಟ್ಟುಬಿಟ್ಟಿದ್ದಾರೆ ಈಗ ಮತ್ತೆ ಲೆಕ್ಕ ಏನಕ್ಕೆ ತೆಗೆಯುತ್ತಿದ್ದಾರೆ? ಎಂದು ತಿಳಿದುಕೊಳ್ಳಬೇಡಿ. ಏಕೆಂದರೆ ನೀವು ದಿನವೂ ತಂದೆಯ ಮುಂದೆ ಹೇಳುತ್ತಿದ್ದೀರಿ ಎಲ್ಲವೂ ನಿನ್ನವೇ, ನನ್ನವಲ್ಲ ಎಂದು ಅಥವಾ ಒಮ್ಮೊಮ್ಮೆ ನನ್ನದು, ಒಮ್ಮೊಮ್ಮೆ ನಿನ್ನದು ಎಂದು ಹೇಳುತ್ತೀರಾ ಅಥವಾ ನನ್ನದು ಎಂದರೆ ನಿನ್ನದು ಎಂದು ಅರ್ಥ, ಎಂದು ಚತುರತೆಯನ್ನು ತೋರಿಸುತ್ತಿಲ್ಲವಲ್ಲ.

ಬ್ರಹ್ಮಾ ತಂದೆಯನ್ನು ನೋಡಿರುವಿರಲ್ಲವೇ- ತನ್ನ ವಿಶ್ರಾಂತಿ ಸಮಯವನ್ನು ಕೂಡ ವಿಚಾರಸಾಗರ ಮಂಥನ ಮಾಡಿ ಮಕ್ಕಳಿಗಾಗಿ ಉಪಯೋಗಿಸುತ್ತಿದ್ದರು. ರಾತ್ರಿ ಕೂಡ ಎಚ್ಚರದಿಂದಿದ್ದು ಮಕ್ಕಳಿಗೆ ಯೋಗ ಶಕ್ತಿಯನ್ನು ಕೊಡುತ್ತಿದ್ದರು. ಈ ಚರಿತ್ರೆಯಂತೂ ಕೇಳುರುವಿರಲ್ಲವೇ? ಬ್ರಹ್ಮಾ ತಂದೆಯ ಕಥೆಯನ್ನು ಕೇಳಿರುವಿರಲ್ಲವೇ? ಕೇವಲ ಕೇಳಿರುವಿರಾ ಅಥವಾ ಅದನ್ನು ಅನುಸರಿಸಿದ್ದೀರಾ ಕೇಳುವುದು ಅರ್ಥಾತ್ ಮಾಡುವುದು.

ಹಾಗಾದರೆ ಮೂರನೇ ಹೆಜ್ಜೆ- ಸದಾ ಆಯಿತು ಪ್ರಭು ಎನ್ನುತ್ತಿದ್ದರು ಮತ್ತು ಸದಾ ಪ್ರಭು ಹಾಜರಾಗಿರುತ್ತಿದ್ದರು. ಬ್ರಹ್ಮಾ ತಂದೆಯಿಂದ ಶಿವ ತಂದೆ ಎಂದು ಬೇರೆಯಾಗಿ ಇರಲಿಲ್ಲ. ಶಿವ ತಂದೆ ಸದಾ ಹಾಜರಾಗಿಯೇ ಇರುತ್ತಿದ್ದರಲ್ಲವೇ, ಮಕ್ಕಳು ತಂದೆ! ಎನ್ನುತ್ತಿದ್ದರು ತಂದೆ ಮಕ್ಕಳು ಎನ್ನುತ್ತಿದ್ದರು. ಮನಸ್ಸಿನ ಅಂತರಂಗದ ಸ್ಥಿತಿಯಲ್ಲಿ ತಂದೆ ಸದಾ ಹಾಜರಿದ್ದ ಹಾಗೆ ಅನುಭವವಾಗುತ್ತಿತ್ತು. ಸೇವೆಯಲ್ಲಿ ಸದಾ ಚಿತ್ತ ಪ್ರಭು! ಎಂದು ಹೇಳುತ್ತಿದ್ದರು. ಭಲೆ ರಾತ್ರಿಯಾಗಲಿ, ಹಗಲಾಗಲಿ, ಸೇವೆಯ ನಿರ್ದೇಶನ ಸಿಕ್ಕಿತು ಮತ್ತು ಪ್ರತ್ಯಕ್ಷದಲ್ಲಿ ಮಾಡಿಬಿಟ್ಟರು ಮತ್ತು ಕರ್ಮದಲ್ಲಿ ಸದಾ ಆಯಿತೆಂದರು. ಆಯಿತು ಎನ್ನುವುದನ್ನು ಕಲಿಸಿದರಲ್ಲವೇ? ಹಾಗಾದರೆ ತಾವೇನು ಅನುಸರಿಸುತ್ತೀರಿ? ಕೆಲವೊಮ್ಮೆ ಆಯಿತು. ಕೆಲವೊಮ್ಮೆ ಇಲ್ಲವೆನ್ನುವುದಿಲ್ಲ ಅಲ್ಲವೇ? ಪ್ರೀತಿಯ ಪ್ರತ್ಯಕ್ಷ ಪ್ರಮಾಣವನ್ನು ತೋರಿಸಿರಿ. ಬಾಬಾರವರೊಂದಿಗೆ ನನಗೆಷ್ಟು ಪ್ರೀತಿಯಿದೆಯೋ ಅಷ್ಟು ಮತ್ತಾರಿಗೂ ಇಲ್ಲ ಎಂದು ಯೋಚಿಸುವುದಿಲ್ಲವೆ! ನನ್ನ ಹೃದಯದಲ್ಲಿ ನೋಡಿ, ಏನು ತೋರಿಸಲಿ, ಏನು ಹೇಳಲಿ ಮಕ್ಕಳು ಇಂತಹ ಹಾಡನ್ನೂ ಹಾಡುತ್ತಾರೆ ಆದರೆ ಪ್ರತ್ಯಕ್ಷ ಪ್ರಮಾಣ ತೋರಿಸಬೇಕು. ಅದರ ಪ್ರತ್ಯಕ್ಷ ಪ್ರಮಾಣವಾಗಿದೆ- ಫಾಲೋ ಫಾದರ್(ಬ್ರಹ್ಮಾ ತಂದೆಯವರನ್ನು ಅನುಸರಿಸುವುದು) ಹಾಗಾದರೆ ಪರಿಶೀಲನೆ ಮಾಡಿಕೊಳ್ಳಿರಿ- ನನ್ನ ಸ್ಥಿತಿಯಲ್ಲಿ, ಸೇವೆಯಲ್ಲಿ, ಕರ್ಮ ಅರ್ಥಾತ್ ಸಂಬಂಧ-ಸಂಪರ್ಕದಲ್ಲಿ ಬರುವುದು. ಮೂರರಲ್ಲಿಯೂ ಸದಾ ಫಾಲೋ ಫಾದರ್ ಮಾಡುತ್ತಿದ್ದೇನೆಯೇ? ಪ್ರತೀ ಆದೇಶವು ಕೇವಲ ಬುದ್ಧಿಯವರೆಗಷ್ಟೇ ಇರುತ್ತದೆಯೇ ಅಥವಾ ಕರ್ಮದಲ್ಲಿಯೂ ಬರುತ್ತದೆಯೇ? ಫಲಿತಾಂಶದಲ್ಲಿ ನೋಡಲಾಯಿತು- ಒಂದುವೇಳೆ ಬುದ್ಧಿ ಹಾಗೂ ವಾಣಿಯಲ್ಲಿ 100 ಮಾತುಗಳಿದ್ದರೆ ಕರ್ಮದಲ್ಲಿ 50 ಅಷ್ಟೇ ಇರುತ್ತದೆ ಹಾಗಾದರೆ ಅಂತಹವರನ್ನು ಫಾಲೋ ಫಾದರ್ ಮಾಡುವವರೆಂದು ಹೇಳುವುದೇ? ಅಪೂರ್ಣ ಫಲಿತಾಂಶವುಳ್ಳವರನ್ನು ಫಾಲೋ ಫಾದರ್‌ನ ಪಟ್ಟಿಯಲ್ಲಿಡಬೇಕಾ? ತಾವೇನು ತಿಳಿಯುತ್ತೀರಿ? ಅಂತಹವರು ಆದೇಶ ಪಾಲಕರೇ? ಅಥವಾ ತಾವು ಅಪೂರ್ಣತೆಯಲ್ಲಿಯೇ ಖುಷಿಯಾಗಿದ್ದೀರಾ? ಅಲ್ಪ-ಸ್ವಲ್ಪ ಅಂತರವಿದ್ದರೆ ಇಷ್ಟವಾಗುವುದೇ! ಆರಂಭದ ದಿನಗಳಲ್ಲಿ ಮಾಲೆಯನ್ನೂ ಮಾಡುತ್ತಿದ್ದರು. ಗೋಲ್ಡನ್-ಸಿಲ್ವರ್ ಯುಗಗಳಲ್ಲಿ ಹೋಗುವವರ ಪಟ್ಟಿಯನ್ನೂ ಮಾಡುತ್ತಿದ್ದರು. ಹಾಗಾದರೆ ಈಗ ಯಾವ ಪಟ್ಟಿಯನ್ನು ಮಾಡುವುದು? ಅಥವಾ ಸಿಲ್ವರ್‌ನಲ್ಲಿ ಹೆಸರನ್ನು ನೋಡಿ ಕಾಪರ್ ಆಗಿಬಿಡುವಿರಾ?

ತಂದೆಯವರಂತು ಸಮಯದ ಸೂಚನೆಯನ್ನು ಕೊಡುತ್ತಾ ಬಂದಿದ್ದಾರೆ ಆದರೆ ಪ್ರಕೃತಿಯೂ ಕೊಡುತ್ತಿದೆ. ಪ್ರಕೃತಿಯೂ ಚಾಲೆಂಜ್ ಮಾಡುತ್ತಿದೆ ಅಂದಮೇಲೆ ಸಮಯದನುಸಾರ ತಾವು ಅನ್ಯರಿಗೂ ಸೂಚನೆಯನ್ನು ಕೊಡುತ್ತಾ ಇರುತ್ತೀರಿ. ಭಾಷಣದಲ್ಲಿ ಎಲ್ಲರಿಗೂ ಹೇಳುತ್ತೀರಿ- ಸಮಯ ಬಂದುಬಿಟ್ಟಿದೆ. ಸಮಯ ಬಂದುಬಿಟ್ಟದೆ ಹಾಗಾದರೆ - ತಮಗೂ ಹೇಳಿಕೊಳ್ಳುತ್ತೀರಾ ಅಥವಾ ಅನ್ಯರಿಗಷ್ಟೇ ಹೇಳುವಿರಾ? ಅನ್ಯರಿಗೆ ಹೇಳುವುದಂತೂ ಸಹಜವೆನಿಸುತ್ತದೆ ಅಲ್ಲವೇ.

ಹಾಗಾದರೆ ಈ ಚಾಲೆಂಜ್‌ನ ಸ್ಮೃತಿಯನ್ನು ತಮ್ಮಲ್ಲಿಯೂ ತಂದುಕೊಳ್ಳಿರಿ. ಸಮಯದನುಸಾರ ತಮ್ಮ ಪರುಷಾರ್ಥದ ಗತಿಯೇನಾಗಿದೆ? ಬಾಪ್‌ದಾದಾರವರು ಒಂದು ಮಾತಿನಲ್ಲಿ ಒಳಗಿಂದೊಳಗೆ ನಗುತ್ತಿರುತ್ತಾರೆ. ಯಾವ ಮಾತಿನಲ್ಲಿ ಎನ್ನುವುದು ಗೊತ್ತಿದೆಯೇ? ಒಂದುಕಡೆ ಮೆಜಾರಿಟಿ ಮಕ್ಕಳು ಕೆಲಕೆಲವೊಮ್ಮೆ ಒಂದು ಸೆಕೆಂಡಿನಲ್ಲಿ ಯೋಚಿಸುತ್ತಾರೆ- ಸಮಯಾನುಸಾರ ಪುರುಷಾರ್ಥದಲ್ಲಿ ತೀವ್ರತೆಯನ್ನು ತರಬೇಕು. ಮತ್ತೊಂದು ಕಡೆ ಮಾಯೆಯು ತನ್ನ ಪ್ರಭಾವ ಬೀರಿದಾಗ ಇನ್ನೊಂದು ಸೆಕೆಂಡಿನಲ್ಲಿ ಇದೆಲ್ಲವೂ ನಡೆಯುತ್ತಿರುತ್ತದೆ, ಇದಂತು ಮಹಾರಥಿಗಳ ಸಮಯದಿಂದಲೂ ಪರಂಪರೆಯಾಗಿ ನಡೆಯುತ್ತಾ ಬಂದಿದೆ ಎಂದು ತಿಳಿಯುತ್ತಾರೆ. ಆಗ ಬಾಪ್‌ದಾದಾರವರು ಏನು ಮಾಡುವರು? ಕೋಪವನ್ನಂತು ಮಾಡಿಕೊಳ್ಳುವುದಿಲ್ಲ ಅಲ್ಲವೆ, ನಗುವರು. ಹಾಗೂ ಇದಕ್ಕೆ ವಿಶೇಷ ಕಾರಣವೇನೆಂದರೆ ಸಮಯ-ಪ್ರತಿ ಸಮಯದಲ್ಲಿ ಪುರುಷಾರ್ಥವನ್ನು ಬಹಳ ಸಹಜ ಮಾಡಿಬಿಟ್ಟಿದ್ದಾರೆ. ಸ್ವಭಾವವನ್ನು ಸಹಜ ಮಾಡುತ್ತಿಲ್ಲ. ಸ್ವಭಾವವನ್ನು ಸರಳ ಸ್ವಭಾವವನ್ನಾಗಿ ಮಾಡಿಕೊಳ್ಳುವುದಿಲ್ಲ. ಇನ್ನೂ ಬಿಗಿಯಾಗಿರುತ್ತಾರೆ. (ಹಳೆಯದರಿಂದ ಮುಕ್ತರಾಗಿರದೇ ಇರುವುದು) ಮತ್ತು ಪುರುಷಾರ್ಥದಲ್ಲಿ ಸಹಜವಾಗಿ ಇದ್ದುಬಿಡುತ್ತಾರೆ. ನಂತರ ಸಹಜ ಯೋಗವಲ್ಲವೇ ಎಂದು ಯೋಚಿಸುತ್ತಾರೆ. ಆದರೆ ಪುರುಷಾರ್ಥದಲ್ಲಿ ಸಹಜವಾಗಿರುವುದನ್ನು ಸಹಜ ಯೋಗ ಎಂದು ಹೇಳುವುದಿಲ್ಲ. ಏಕೆಂದರೆ ಸಹಜವಾಗಿರುವುದರಿಂದ ಶಕ್ತಿಗಳು ಮರ್ಜ್ (ಗುಪ್ತ) ಆಗಿಬಿಡುತ್ತಿವೆ. ಪ್ರತ್ಯಕ್ಷವಾಗಿ ಇರುವುದಿಲ್ಲ. ತಾವೆಲ್ಲರೂ ತಮ್ಮ ಬ್ರಾಹ್ಮಣ ಜೀವನದ ಆದಿಯ ಸಮಯವನ್ನು ನೆನಪು ಮಾಡಿಕೊಳ್ಳಿರಿ. ಆ ಸಮಯದ ಪುರುಷಾರ್ಥವು ಹೇಗಿತ್ತು? ಸಹಜ ಪುರುಷಾರ್ಥವಾಗಿತ್ತೇ ಅಥವಾ ಗಮನವಿಡುವ ಪುರುಷಾರ್ಥವಾಗಿತ್ತೇ? ಗಮನವಿಡುವುದಾಗಿತ್ತು. ಒಲವು-ಉತ್ಸಾಹ ತುಂಬಿರುವ ಪುರುಷಾರ್ಥವಿತ್ತು ಮತ್ತು ಈಗ ಹುಡುಗಾಟಿಕೆಯ ಮೆತ್ತನೆಯ ದಿಂಬು ಹಾಗೂ ಹಾಸಿಗೆಯು ಸಿಕ್ಕಿ ಬಿಟ್ಟದೆ. ಸಾಧನಗಳು ಹೆಚ್ಚಾಗಿ ವಿಶ್ರಾಂತಿ ಪ್ರಿಯರನ್ನಾಗಿ ಮಾಡಿಬಿಟ್ಟಿವೆ. ಹಾಗಾದರೆ ತಮ್ಮ ಆದಿಯ ಪುರುಷಾರ್ಥ, ಆದಿಯ ಸೇವೆ ಹಾಗೂ ಆದಿಯ ಒಲವು-ಉತ್ಸಾಹವನ್ನು ಪರಿಶೀಲನೆ ಮಾಡಿಕೊಳ್ಳಿರಿ- ಏನಿತ್ತು? ವಿಶ್ರಾಂತಿ ಪ್ರಿಯರಾಗಿದ್ದೀರಾ? (ಇಲ್ಲ) ಮತ್ತು ಈಗಾದರೂ ಸ್ವಲ್ಪ-ಸ್ವಲ್ಪ ಇದೆಯೇ? ಸಾಧನಗಳು ಸೇವೆಗಾಗಿ ಸಿಕ್ಕಿದೆ. ಅದನ್ನು ತಮ್ಮ ವಿಶ್ರಾಂತಿ ಪ್ರಿಯರನ್ನಾಗಿ ಮಾಡುವುದಕ್ಕಾಗಿ ಅಲ್ಲ. ಹಾಗಾದರೆ ಈಗ ಮೆತ್ತನೆಯ ದಿಂಬು ಹಾಸಿಗೆಯನ್ನು ತೆಗೆದು ಎಸೆಯಿರಿ. ಪಟ್ಟದ ರಾಣಿಯರಾಗಿರಿ. ಪಟ್ಟದ ರಾಜರಾಗಿರಿ. ಭಲೆ ಮಂಚದ ಮೇಲೆ ಮಲಗಿರಿ ಆದರೆ ಸ್ಥಿತಿಯು ಪಟ್ಟದ ರಾಣಿ-ರಾಜರಾಗಿರುವುದೇ ಇರಲಿ, ಆದಿ ಸೇವೆಯ ಸಮಯದಲ್ಲಿ ಸಾಧನಗಳಿರಲಿಲ್ಲ ಆದರೆ ಸಾಧನೆಯು ಎಷ್ಟೊಂದು ಶ್ರೇಷ್ಠವಾಗಿತ್ತು. ಆ ಆದಿ ಸಾಧನೆಯಿಂದಲೇ ಇಷ್ಟೆಲ್ಲಾ ವೃದ್ಧಿಯನ್ನು ಮಾಡಿದೆ. ಹಾಗಾದರೆ ಸಾಧನೆಯ ಬೀಜವನ್ನು ವಿಸ್ತಾರದಲ್ಲಿ ಗುಪ್ತ ಮಾಡಿಬಿಡಬಾರದು. ಯಾವಾಗ ವಿಸ್ತಾರವಾಗುವುದೋ ಅಗ ಬೀಜವು ಗುಪ್ತವಾಗಿಬಿಡುತ್ತದೆ, ಸಾಧನೆಯು ಬೀಜವಾಗಿದೆ. ಸಾಧನವು ವಿಸ್ತಾರವಾಗಿದೆ. ಸಾಧನೆಯ ಬೀಜವನ್ನು ಗುಪ್ತವಾಗಲು ಬಿಡಬಾರದು, ಈಗ ಪುನಃ ಬೀಜವನ್ನು ಪ್ರತ್ಯಕ್ಷಗೊಳಿಸಿರಿ.

ಬಾಪ್‌ದಾದಾರವರು ಈ ಸೀಜನ್ನಿನಲ್ಲಿ ಕಾರ್ಯವನ್ನು ಕೊಟ್ಟಿದ್ದರು ಆದರೆ ಮಾಡಿಲ್ಲ. ಏನನ್ನು ಕೊಟ್ಟಿದ್ದರೆಂದು ನೆನಪಿದೆಯೇ? ಅಥವಾ ಬರವಣಿಗೆಯಿರುವ ಕಾಪಿಯಲ್ಲಿದೆಯೇ. ಈ ಕಾರ್ಯವನ್ನು ಕೊಟ್ಟಿದ್ದರು- ಬೇಹದ್ದಿನ ವೈರಾಗ್ಯ ವೃತ್ತಿಯ ಬಗ್ಗೆ ತಮ್ಮೊಂದಿಗೂ ಚರ್ಚೆ ಮಾಡಿರಿ ಹಾಗೂ ಪರಸ್ಪರದಲ್ಲಿಯೂ ಚರ್ಚೆ ಮಾಡಿರಿ ಹಾಗೂ ಪ್ರತ್ಯಕ್ಷದಲ್ಲಿಯೂ ಈ

ಸಾಧನೆಯ ಬೀಜವನ್ನು ಪ್ರತ್ಯಕ್ಷಗೊಳಿಸಿರಿ. ಇದನ್ನು ಮಾಡಿದ್ದಿರಾ? ಅಥವಾ ಕೇವಲ ಒಂದು ದಿನ ಚರ್ಚೆ ಮಾಡಿದಿರಿ, ವರ್ಕ್ ಶಾಪ್ ಆಯಿತು ಆದರೆ ವರ್ಕ್(ಕಾರ್ಯದಲ್ಲಿ)ನಲ್ಲಂತು ಬಂದಿಲ್ಲ. ಹಾಗಾದರೆ ವರ್ತಮಾನ ಸಮಯದನುಸಾರ ಈಗ ತಮ್ಮ ಸೇವೆ ಅಥವಾ ಸೇವಾಸ್ಥಾನಗಳ ದಿನಚರಿಯಲ್ಲಿ ಬೇಹದ್ದಿನ ವೈರಾಗ್ಯ ವೃತ್ತಿ ಇರುವ ಹಾಗೆ ತಯಾರು ಮಾಡಿರಿ. ಈಗ ಆರಾಮದ ದಿನಚರಿಯು ಸೇರಿಬಿಟ್ಟಿದೆ. ಈ ಹುಡುಗಾಟಿಕೆಯೂ ಶರೀರದ ಚಿಕ್ಕಪುಟ್ಟ ರೋಗಗಳ ನೆಪವನ್ನೂ ಮಾಡುತ್ತಿರುತ್ತದೆ. ಮುಂಚೆ ಇಂತಹ ರೋಗಗಳಿತ್ತಲ್ಲವೆ, ಆದರೆ ಸೇವೆಯ ಒಲವು ರೋಗಗಳನ್ನೂ ಗುಪ್ತ ಮಾಡಿಬಿಡುತ್ತದೆ. ಯಾವುದೇ ಕಾರ್ಯವು ತಮಗೆ ಇಷ್ಟವಾಗಿರುವುದಿದದ್ದರೆ ರೋಗದ ನೆನಪು ಬರುತ್ತದೆಯೇ? ಒಂದುವೇಳೆ ತಮ್ಮ ನಿಮಿತ್ತ ಸಹೋದರಿಯು ಹೇಳುತ್ತಾರೆ- ಬೇಡ, ನಿಮಗೆ ಆರೋಗ್ಯವು ಸರಿಯಾಗಿಲ್ಲ. ಅನ್ಯರನ್ನು ಮಾಡಲು ಬಿಡಿ ಎಂದರೆ ನೀವು ಮಾಡಲು ಬಿಡುವಿರಾ? ಆ ಸಮಯದಲ್ಲಿ ಜ್ವರ ಅಥವಾ ತಲೆ ನೋವಿದ್ದರೂ ಎಲ್ಲಿಗೆ ಹೊರಟುಹೋಗುತ್ತದೆ? ಮತ್ತೆ ಸೇವೆಯೇನಾದರೂ ಇಷ್ಟವಿಲ್ಲದಿದ್ದರೆ ಏನಾಗುತ್ತದೆ? ತಲೆ ನೋವೂ ಬಂದುಬಿಡುತ್ತದೆ, ಹೊಟ್ಟೆ ನೋವೂ ಬಂದುಬಿಡುತ್ತದೆ. ಮುಂಚೆಯೇ ತಿಳಿಸಿದೆವಲ್ಲವೆ- ಒಂದುವೇಳೆ ನೆಪ ಮಾಡುವುದರಲ್ಲೇನಾದರೂ ಜ್ವರ ಎಂದು ಹೇಳಿದರೆ ಶಿಕ್ಷಕನು ಥರ್ಮಾಮೀಟರ್ ಇಡಿ ಎಂದು ಹೇಳುತ್ತಾರೆ. ಆದರೆ ಹೊಟ್ಟೆನೋವು, ತಲೆ ನೋವಿಗಂತು ಥರ್ಮಾ ಮೀಟರ್ ಇಲ್ಲವಲ್ಲವೆ! ಮೂಡ್ ಸರಿಯಾಗಿಲ್ಲದಿದ್ದರೆ ಹೊಟ್ಟೆ ನೋವಿದೆ ಎಂದು ಹೇಳುವುದು. ಇದು ಹುಡುಗಾಟಿಕೆಯ ನೆಪವಾಗಿದೆ. ಹಾಗಾದರೆ ಬೇಹದ್ದಿನ ವೈರಾಗ್ಯ ವೃತ್ತಿಯು ಗುಪ್ತವಾಗಿದೆಯೇ ಅಥವಾ ನೆಪಗಳನ್ನು ಮಾಡುವುದು ಇಮರ್ಜ್ ಆಗಿಬಿಟ್ಟಿದೆ.

ಬಾಪ್ ದಾದಾರವರು ನೋಡುತ್ತಿದ್ದರು- ಎಲ್ಲಾ ಮಕ್ಕಳು ಬಹಳ ಸ್ನೇಹದಿಂದ ಮಧುಬನಕ್ಕೆ ತಲುಪಿದ್ದಾರೆ. ಇವರಲ್ಲಿ ಸ್ನೇಹವಂತು ಕಾಣಿಸಿತು ಅದಕ್ಕಾಗಿ ಶುಭಾಷಯಗಳು. ಬಾಪ್‌ದಾದಾರವರಿಗೂ ಮಕ್ಕಳ ಖುಷಿಯನ್ನು ನೋಡಿ ಖುಷಿಯಾಗುತ್ತದೆ ಆದರೆ ಮುಂದೆ ಏನು ಮಾಡಬೇಕು? ಕೇವಲ ಮಧುಬನದವರೆಗೆ ತಲುಪುವುದೇ ಅಥವಾ ಸ್ನೇಹದ ಪ್ರತ್ಯಕ್ಷ ಪ್ರಮಾಣವನ್ನು ತೋರಿಸುವುದಕ್ಕಾಗಿ ಫರಿಶ್ತಾ ರೂಪದಲ್ಲಿ ವತನಕ್ಕೆ ತಲುಪುವುದೇ? ಏನು ಮಾಡಬೇಕು? ಮಧುಬನಕ್ಕೆ ತಲುಪಿರುವುದಕ್ಕಾಗಿ ಶುಭಾಷಯಗಳು ಆದರೆ ಫರಿಶ್ತೆಯಾಗಿ ವತನಕ್ಕೆ ಯಾವಾಗ ತಲುಪುವಿರಿ? ಎಲ್ಲರಿಗೂ ತಾವು ನಡೆಯುತ್ತಾ-ಸುತ್ತಾಡುತ್ತಾ ಫರಿಶ್ತೆಯಾಗಿ ಕಾಣಿಸಬೇಕು. ಮಾತು-ಚಲನೆ, ಇರುವುದೆಲ್ಲವೂ ಫರಿಶ್ತೆಯಾಗಿಬಿಡಬೇಕು. ಮತ್ತು ಫರಿಶ್ತೆಯ ಅರ್ಥವೇನೆಂದರೆ- ಡಬಲ್ ಲೈಟ್, ಹಾಗಾದರೆ ದಿನಚರಿಯಲ್ಲಿ ಲೈಟ್ ಆಗಿರಬಾರದು ಆದರೆ ಸಂಬಂಧ-ಸಂಪರ್ಕದಲ್ಲಿ, ಸ್ಥಿತಿಯಲ್ಲಿ ಸಹಜವಾಗಿರಬೇಕು (ಹಗುರವಾಗಿರಬೇಕು). ಹಾಗಾದರೆ ಲೈಟ್ ಆಗಿರುವುದು ಬರುತ್ತದೆಯೇ ಅಥವಾ ಹೊರೆಯು ಸೆಳೆಯುತ್ತಿರುತ್ತದೆಯೇ? ಬಾಪ್‌ದಾದಾರವರು ಸ್ನೇಹದ ಪ್ರತ್ಯಕ್ಷ ಪ್ರಮಾಣವನ್ನು ನೋಡಲು ಬಯಸುತ್ತಾರೆ ಮತ್ತು ಯಾವಾಗ ಸ್ನೇಹದ ಪ್ರತ್ಯಕ್ಷ ಪ್ರಮಾಣವನ್ನು ಕೊಡುತ್ತಾರೆಯೋ ಆಗ ತಮಗೂ ಚಪ್ಪಾಳೆಯನ್ನು ಹಾಕುವ ಅವಶ್ಯಕತೆಯಿರುವುದಿಲ್ಲ ಆದರೆ ಮಾಯೆ, ಪ್ರಕೃತಿ ಎಲ್ಲವೂ ಚಪ್ಪಾಳೆ ಹಾಕುವರು, ಮಾಯೆಯೂ ಸಹ ವಾಹ್ ವಿಜಯಿಗಳೇ ವಾಹ್! ಎಂದು ಚಪ್ಪಾಳೆಯನ್ನು ಹಾಕುವುದು. ಪ್ರಕೃತಿಯೂ ಮಾಡುತ್ತದೆ. ಹಾಗಾದರೆ ಈಗ ಸ್ವಲ್ಪ ಪರಿವರ್ತನೆ ಮಾಡಿಕೊಳ್ಳಿರಿ.

ಇಂದು ಸೀಸನ್ ನ ಕೊನೆಯ ಮೇಳೆ. ವಿದೇಶಿಯರ ಸೀಜನ್ ಬೇರೆ ಆದರೆ ಭಾರತ ದೇಶದ ಪ್ರೋಗ್ರಾಮ್ ನ ಪ್ರಮಾಣವಾಗಿ ಕಡೆಯದಿನ. ಮೇಳೆಯ ವಿಷಯ ಬೇರೆ. ಇಡೀ ಸೀಸನ್ ನಲ್ಲಿ ಮಿಲನ ಮಾಡುವುದು, ಮನೋರಂಜನೆಯಿಂದ ಇರುವುದು, ಖುಷಿಯಿಂದ ಆಚರಿಸಿಕೊಳ್ಳುವುದು ಬಹಳ ಚೆನ್ನಾಗಿದೆ ಆದರೆ ಪ್ರಮಾಣವೇನು ಎಂಬುದು ನೋಡುತ್ತಿದ್ದಾರೆ ಸೆಂಟರ್ಸ್ ನಲ್ಲಾದರೂ ಅಥವಾ ನಿಮ್ಮ ಕುಟುಂಬದಲ್ಲಿ ಇರುತ್ತಿದ್ದರೂ ಕೂಡ ನಿಮ್ಮ ದಿನಚರಿಯನ್ನು ಪರಿವರ್ತನೆ ಮಾಡಿಕೊಳ್ಳಿ. ಇನ್ನೇನು ಪರಿವರ್ತನೆ ಮಾಡಿಕೊಳ್ಳಬೇಕು? ತಂದೆಯನ್ನು ಅನುಸರಿಸಬೇಕು. ಬ್ರಹ್ಮಾತಂದೆ ಏನು ಮಾಡಿದರು? ಬ್ರಹ್ಮ ತಂದೆ ಸೋಮಾರಿತನದಿಂದ ಇರುತ್ತಿದ್ದರೇ? ಸಾಕ್ಷಿಯಿದೆಯಲ್ಲವೇ, ಕಡೆಯ ದಿನದವರೆಗೂ ವಿಶ್ರಾಂತಿಯನ್ನು ತೆಗೆದುಕೊಂಡರೇ? ಬ್ರಹ್ಮಾತಂದೆ ಎಂದರೆ ಎಲ್ಲರಿಗೂ ಸ್ನೇಹವಿದೆಯಲ್ಲವೇ, ಎಷ್ಟು ಸ್ನೇಹವಿದೆ? (ಅತಿ ಸ್ನೇಹವಿದೆ) ಮತ್ತು ಎಷ್ಟು ಸಾಕ್ಷಿಯನ್ನು(ಪ್ರತ್ಯಕ್ಷ ಪ್ರಮಾಣವನ್ನು) ತೋರಿಸಿದ್ದೀರಿ . ಇದರಲ್ಲಿ ಅತಿಯಾಗಿ ತೋರಿಸಿದ್ದೇವೆ ಎಂದು ಹೇಳುತ್ತಿಲ್ಲ ಈಗ ಸ್ವಯಂನ್ನು ಸ್ನೇಹದೊಂದಿಗೆ ಶಕ್ತಿಶಾಲಿಯನ್ನಾಗಿ ತಯಾರು ಮಾಡಿಕೊಳ್ಳಿರಿ. ಸ್ವಯಂನ ಪರಿವರ್ತನೆಯಲ್ಲಿ ಶಕ್ತಿ ರೂಪವಾಗಿರಿ. ತಮ್ಮಲ್ಲಿ ಪರಿವರ್ತನೆಯನ್ನು ತನ್ನಿ . ಸಹಜಯೋಗಿ, ಸಹಜಯೋಗಿ ಎಂದು ಹೇಳಿ-ಹೇಳಿ ಹುಡುಗಾಟಿಕೆಯಲ್ಲಿ ಬರಬೇಡಿ. ಬಾಪ್‌ದಾದಾರವರು ನೋಡುತ್ತಿದ್ದಾರೆ- ಸ್ವಯಂನ ಬಗ್ಗೆ, ಸೇವೆಯ ಬಗ್ಗೆಯಾಗಿರಲಿ. ನಾಲ್ಕೂ ಕಡೆಯ ಸಂಬಂಧ-ಸಂಪರ್ಕದ ಬಗ್ಗೆ ಹುಡುಗಾಟಿಕೆಯು ಹೆಚ್ಚಾಗಿಬಿಟ್ಟಿದೆ. ಇದೆಲ್ಲವೂ ನಡೆಯುತ್ತಿರುತ್ತದೆ ಎಂದು ಯೋಚಿಸಬಾರದು. ಒಬ್ಬರು ಇನ್ನೊಬ್ಬರನ್ನು ಇದರಲ್ಲಿ ಕಾಪಿ ಮಾಡಬಾರದು, ತಂದೆಯವರನ್ನು ಕಾಪಿ ಮಾಡಿರಿ. ಅನ್ಯರನ್ನು ನೋಡುವಂತಹ ಹವ್ಯಾಸವು ಸ್ವಲ್ಪ ಹೆಚ್ಚಾಗಿಬಿಟ್ಟಿದೆ. ತಮ್ಮನ್ನು ನೋಡಿಕೊಳ್ಳುವುದರಲ್ಲಿ ಹುಡುಗಾಟಿಕೆ ಬಂದುಬಿಟ್ಟದೆ. ಬಾಪ್‌ದಾದಾರವರು ತಿಳಿಸಿದ್ದರಲ್ಲವೇ- ಸಮೀಪ ದೃಷ್ಟಿಯು ಬಲಹೀನವಾಗಿಬಿಟ್ಟದೆ, ದೂರ ದೃಷ್ಟಿಯು ತೀಕ್ಷ್ಣವಾಗಿಬಿಟ್ಟಿದೆ. ಈಗೇನು ಮಾಡುವಿರಿ? ಸೀಜನ್ನಿನ ಫಲವೇನು ಕೊಡುತ್ತೀರಿ? ಕೇವಲ ಬಾಬಾ ಬಂದರು. ಭೇಟಿಯಾದರು. ಆಚರಿಸಿದೆವು. ಮುರಳಿ ಕೇಳಿದೆವು- ಇದೇ ಫಲವಾಗಿದೆಯೇ? ಪ್ರತೀ ಸೀಜನ್ನಿನ ಫಲವಿರುತ್ತದೆಯಲ್ಲವೇ? ಹಾಗಾದರೆ ಈ ಸೀಜನ್ನಿನ ಫಲವಾಗಿ ಬಾಪ್‌ದಾದಾರವರಿಗೆ ಭೋಗವನ್ನೇನು ಇಡುವಿರಿ? ಭೋಗವನ್ನಿಡುತ್ತೀರೆಂದರೆ ಫಲವನ್ನೂ ಇಡುತ್ತೀರಲ್ಲವೇ? ಆ ಫಲವಂತು ಬಜಾರಿನಲ್ಲಿ ಸಿಕ್ಕಿಬಿಡುತ್ತದೆ. ಅದೇನು ದೊಡ್ಡ ಮಾತಲ್ಲ. ಈಗ ಈ ಸೀಜನ್ನಿನ ಫಲವನ್ನೇನು ಕೊಡುಗೆಯಾಗಿ ಇಡುವಿರಿ ಅಥವಾ ಭೋಗವನ್ನು ಇಡುವಿರಾ? ಇಡುತ್ತೀರಾ ಅಥವಾ ಕಷ್ಟವೇ? ಹಾಗಾದರೆ ನಂಬರ್‌ವನ್ ಭೋಗವು ಎಲ್ಲಿಂದ ಬರುತ್ತದೆ ಎಂಬುದನ್ನು ನೋಡೋಣ! ಪ್ರತಿಜ್ಞೆಯನ್ನಂತು ಬಹಳ ಒಳ್ಳೆಯದನ್ನೇ ಮಾಡಿ ಹೋಗುತ್ತೀರಿ. ಎಂದೂ ಇಲ್ಲವೆಂದು ಹೇಳುವುದಿಲ್ಲ, ಹೌದು-ಹೌದು ಎನ್ನುತ್ತೀರಿ. ಖುಷಿ ಪಡಿಸಿಬಿಡುತ್ತೀರಿ! ಆದರೆ ಈಗೇನು ಮಾಡುವಿರಿ? ನಿಮಿತ್ತ ಶಿಕ್ಷಕಿಯರು ನಂಬರ್‌ವನ್ ಭೋಗವನ್ನು ಇಡುವಿರಲ್ಲವೇ? ಎಲ್ಲಾ ಸೇವಾಕೇಂದ್ರದ ಭೋಗವನ್ನು ನೋಡುತ್ತೇವೆ. ಪ್ರವೃತ್ತಿಯವರೂ ಸಹ ಭೋಗವನ್ನು ಇಡುತ್ತೀರಲ್ಲವೆ ಅಥವಾ ತಾವೇ ಸ್ವೀಕರಿಸಿಬಿಡುತ್ತೀರಾ? ಇದಂತೂ ಸೇವಾಕೇಂದ್ರದವರ ಕಾರ್ಯವಾಗಿದೆ ಎಂದು ಯೋಚಿಸಬಾರದು. ಇದು ಎಲ್ಲರ ಕಾರ್ಯವಾಗಿದೆ. ಹಾಗಾದರೆ ಆದೇಶ ಪಾಲಕನಾಗುವ ಹೆಜ್ಜೆಯನ್ನು ಪ್ರತ್ಯಕ್ಷದಲ್ಲಿ ತರಬೇಕಾಗಿದೆ.

ನಾಲ್ಕನೇ ಹೆಜ್ಜೆಯಾಗಿದೆ - ವಿಧೇಯ. ಎಂದೂ ಮನಸ್ಸಿನಿಂದ, ಬುದ್ಧಿಯಿಂದ, ಸಂಕಲ್ಪದಿಂದಲೂ ತಂದೆಯವರ ವಿಶ್ವಾಸದ್ರೋಹಿ (ಅವಿಧೇಯ) ಆಗಬಾರದು. ವಿಧೇಯನ ಅರ್ಥ- ಸದಾ ಒಬ್ಬ ತಂದೆಯ ಹೊರತು ಮತ್ಯಾರೂ ಇಲ್ಲ. ಸಂಕಲ್ಪದಲ್ಲಿಯೂ ದೇಹ, ದೇಹದ ಸಂಬಂಧ, ದೇಹ ಪದಾರ್ಥ ಅಥವಾ ದೇಹವುಳ್ಳ ವ್ಯಕ್ತಿಯು ಆಕರ್ಷಿಸಬಾರದು. ಹೇಗೆ ಪತಿ-ಪತ್ನಿ ಒಬ್ಬರಿನ್ನೊಬ್ಬರಿಗೆ ವಿಧೇಯನಾಗಿರುತ್ತಾರೆ. ಸ್ವಪ್ನದಲ್ಲಿ ಅನ್ಯರ ನೆನಪು ಬಂದರೂ ವಿಧೇಯನೆಂದು ಹೇಳುವುದಿಲ್ಲ. ಅದರಲ್ಲಿ ಬ್ರಹ್ಮಾ ತಂದೆಯವರನ್ನು ನೋಡಿದಿರಿ- ಸಂಕಲ್ಪದಲ್ಲಿಯೂ ಇನ್ನೊಂದು ಕಡೆಯಿರಲಿಲ್ಲ. ಒಬ್ಬ ಬಾಬಾರವರೇ ಸರ್ವಸ್ವವಾಗಿದ್ದರು, ಇದಕ್ಕೇ ವಿಧೇಯನೆಂದು ಹೇಳಲಾಗುತ್ತದೆ. ಒಂದುವೇಳೆ ಪದಾರ್ಥದಲ್ಲಾದರೂ ಆಕರ್ಷಣೆಯಿದೆ. ಸಾಧನಗಳಲ್ಲಿ ಆಕರ್ಷಣೆ ಇದ್ದರೂ ಸಹ ತಮ್ಮ ಸಾಧನೆಯು ಖಂಡಿತವಾಗಿಬಿಡುತ್ತದೆ. ವಿಧೇಯತೆಯು ಖಂಡನೆಯಾಗಿಬಿಡುತ್ತದೆ. ಮತ್ತು ಖಂಡಿತವಾಗಿರುವ ಯಾವುದೇ ವಸ್ತುವಿಗೆ ಸಂಪನ್ನ, ಪೂಜ್ಯನೆಂಬ ಮಹಿಮೆಯಾಗುವುದಿಲ್ಲ. ಹಾಗಾದರೆ - ಸಂಕಲ್ಪದಲ್ಲಾದರೂ ಯಾವುದೇ ಆಕರ್ಷಣೆಯು ಅವಿಧೇಯನನ್ನಾಗಿ ಮಾಡುತ್ತಿಲ್ಲವೇ ಎಂದು ಪರಿಶೀಲನೆ ಮಾಡಿಕೊಳ್ಳಿರಿ. ಒಂದುವೇಳೆ ಸ್ವಲ್ಪವೇನಾದರೂ ಯಾವುದರ ಬಗ್ಗೆಯಾದರೂ ವಿಶೇಷ ಆಕರ್ಷಣೆಯಿದೆ. ಸ್ವಲ್ಪವಾದರೂ ವ್ಯಕ್ತಿಗತ ರೂಪದಲ್ಲಿ ಬಾಗುತ್ತಿದ್ದೀರಿ, ಭಲೆ ಗುಣಗಳ ಬಗ್ಗೆ ಅಥವಾ ಸೇವೆಯಲ್ಲಿ, ಅಥವಾ ಒಳ್ಳೆಯ ಸಂಸ್ಕಾರದಲ್ಲಾದರೂ ವಿಶೇಷವಾಗಿ ಪ್ರಭಾವಿತರಾಗುತ್ತಿದ್ದರೆ ವಿಧೇಯನೆಂದು ಹೇಳುವುದಿಲ್ಲ. ಎಲ್ಲರ ವಿಶೇಷತೆ, ಬೇಹದ್ದಿನ ವಿಶೇಷತೆಯಲ್ಲಿ ಆಕರ್ಷಿಸುವುದು ಬೇರೆ ಮಾತು ಆದರೆ ಯಾವುದೇ ವಿಶೇಷ ವ್ಯಕ್ತಿ ಅಥವಾ ವೈಭವದಲ್ಲಿ ಆಕರ್ಷಿತರಾದರೆ ವಿಧೇಯನ ಪಟ್ಟಿಯಲ್ಲಿ ಖಂಡನೆ ಆಗಿರುವುದೆಂದು ಗಾಯನವಾಗುತ್ತದೆ. ಹಾಗಾದರೆ ಖಂಡನೆಯಾಗಿರುವ ಮೂರ್ತಿಯಂತು ಆಗಿಲ್ಲವೇ? ಪೂಜ್ಯರಾಗಿದ್ದೀರಾ? ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ, ಎಲ್ಲಾದರೂ ವಿಶೇಷ ಆಕರ್ಷಣೆ ಅಥವಾ ಬಾಗುವಿಕೆಯಿಲ್ಲವೇ? ಸಂಕಲ್ಪದಲ್ಲಿಯೂ ಬಾಗುತ್ತಿಲ್ಲವೆ. ವಾಚಾ-ಕರ್ಮಣಾದ ಮಾತಂತೂ ಬಿಟ್ಟುಬಿಡಿ ಆದರೆ ಸಂಕಲ್ಪದಲ್ಲಾದರೂ ಇದ್ದರೆ ಖಂಡಿತವಾಗಿರುವ ಪಟ್ಟಿಯಲ್ಲಿ ಬಂದುಬಿಡುತ್ತೀರಿ, ಹಾಗಾದರೆ ಪರಿಶೀಲನೆ ಮಾಡಿಕೊಳ್ಳುವುದು ಬರುತ್ತದೆಯಲ್ಲವೇ? ಒಳ್ಳೆಯದು!

ಈಗ ಯಾವುದಾದರೂ ನವೀನತೆಯನ್ನು ತೋರಿಸಿರಿ. ಹೊಸ ವರ್ಷ ಪ್ರಾರಂಭವಾಗಿದೆ. ಬಾಪ್‌ದಾದಾರವರಿಗೆ ಆದಿಯ ಬೇಹದ್ ವೈರಾಗ್ಯ ಸದಾ ನೆನಪಿಗೆ ಬರುತ್ತದೆ. ಆ ಸಮಯದ ಫಲಗಳು ನೀವೇ. ಬೇಹದ್ ವೈರಾಗ್ಯ ವೃತ್ತಿ ಇಲ್ಲದಿದ್ದರೆ ಇಷ್ಟು ಸ್ಥಾಪನೆಯ ವೃದ್ಧಿ ನಡೆಯುತ್ತಿರಲಿಲ್ಲ. ಬ್ರಹ್ಮಾ ತಂದೆ ಅಂತಿಮದ ವರೆಗೆ ದೊಡ್ಡ ವಯಸ್ಸಾದರೂ ತನುವಿನ ಕರ್ಮದ ಖಾತೆ ಪೂರ್ತಿ ಮಾಡಿಕೊಳ್ಳುತ್ತಾ ಕೂಡ ಬೇಹದ್ ವೈರಾಗ್ಯ ಸ್ಥಿತಿಯನ್ನು ಪ್ರತ್ಯಕ್ಷವಾಗಿ ತೋರಿಸಿದರು. ಸಾಧನಗಳನ್ನು ಸ್ವಯಂಗಾಗಿ ಸ್ವೀಕರಿಸಲಿಲ್ಲ, ಸೇವೆಗಾಗಿ ಇರುವುದು ಬೇರೆ. ಸ್ವಯಂಗಾಗಿ ಸ್ವೀಕರಿಸುವುದು ಮತ್ತು ಸೇವೆಗಾಗಿ ಕಾರ್ಯದಲ್ಲಿ ಉಪಯೋಗಿಸುವುದರಲ್ಲಿ ಇರುವ ಅಂತರ ತಿಳಿದಿದೆಯಲ್ಲವೇ? ಸ್ವಯಂನ ಪ್ರತಿ ಬೇಹದ್ ವೈರಾಗ್ಯವೃತ್ತಿ ಇರಬೇಕು. ಸೇವೆಗಾಗಿ ಸಾಧನಗಳನ್ನು ಕಾರ್ಯದಲ್ಲಿ ಉಪಯೋಗಿಸಿರಿ ಆದರೆ ಸಾಧನಗಳು ಸೋಮಾರಿತನದಲ್ಲಿ ತರಬಾರದು. ಹಾಗಾದರೆ ತಂದೆಯನ್ನು ಅನುಸರಿಸಬೇಕಲ್ಲವೇ ಅಥವಾ ಇನ್ಮುಂದೆ ಬರುವವರು ಅನುಸರಿಸಬೇಕಾ? ನೀವೇ

ಮಾಡಬೇಕು, ಮಕ್ಕಳನ್ನು ಸದಾ ಏನೆನ್ನುತ್ತಾರೆ ಕುಲದೀಪಗಳು. ಬ್ರಾಹ್ಮಣ ಕುಲದಲ್ಲಿ ಸದಾ ಬೆಳಗುತ್ತಿರುವ ದೀಪಗಳೇ ತಾನೆ! ತಂದೆಯ ಶ್ರೇಷ್ಠ ಆಸೆಗಳ ದೀಪವನ್ನು ಬೆಳಗಿಸುವ ಕುಲದೀಪಗಳೇ ತಾನೆ.

**ನಾಲ್ಕೂ ಕಡೆಯಲ್ಲಿರುವ ಸ್ನೇಹದ ಪ್ರತ್ಯಕ್ಷ ಪ್ರಮಾಣ ಕೊಡುವಂತಹ, ಪ್ರತಿಯೊಂದು ಆದೇಶವನ್ನು ಸಂಕಲ್ಪ, ವಾಣಿ ಹಾಗೂ ಕರ್ಮದಲ್ಲಿ ತರುವಂತಹ, ಸದಾ ತಮ್ಮನ್ನು ತಂದೆಯ ಸಮಾನ ಸರಳ ಹಾಗೂ ಉದಾಹರಣಾ ಮೂರ್ತಿಯನ್ನಾಗಿ ಮಾಡಿಕೊಳ್ಳುವಂತಹ, ಬ್ರಹ್ಮಾ ತಂದೆಯವರ ಪ್ರತೀ ಹೆಜ್ಜೆಯಲ್ಲಿ ಹೆಜ್ಜೆಯನ್ನು ಇಡುವಂತಹ ಶಕ್ತಿಶಾಲಿ ತಂದೆಯ ಸಮಾನರಾಗುವ ದೃಡ ಸಂಕಲ್ಪವುಳ್ಳ ಸರ್ವ ಮಕ್ಕಳಿಗೂ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 26-01-1995

***ಬ್ರಹ್ಮಾತಂದೆಯ ಇನ್ನೆರಡು ಹೆಜ್ಜೆಗಳು ಆದೇಶ ಪಾಲಕ ಮತ್ತು ವಿಧೇಯತೆ.***

ಬ್ರಹ್ಮಾತಂದೆಯವರ ಮೂರನೆಯ ಹೆಜ್ಜೆ- ಸದಾ ಆಗಲಿ(ಚಿತ್ತ) ಪ್ರಭು ಎಂದು ಹೇಳುತ್ತಿದ್ದರು ಮತ್ತು ಶಿವ ತಂದೆ ಸದಾ ಹಾಜರಾಗಿರುತ್ತಿದ್ದರು. ಸೇವೆಯಲ್ಲಿ ಸದಾ ಚಿತ್ತ ಪ್ರಭು ಎಂದು ಹೇಳುತ್ತಿದ್ದರು. ರಾತ್ರಿಯಲ್ಲಾದರೂ, ಹಗಲಲ್ಲಾದರೂ ಸೇವೆಯ ನಿರ್ದೇಶನ ಲಭಿಸಿದಾಕ್ಷಣ ಪ್ರತ್ಯಕ್ಷದಲ್ಲಿ ಮಾಡಿಬಿಟ್ಟರು ಮತ್ತು ಪ್ರತಿಯೊಂದು ಕರ್ಮದಲ್ಲಿ ಹಾಗೆಯೇ ಎಂದು ಹೇಳುತ್ತಿದ್ದರು. ನಾಲ್ಕನೆಯ ಹೆಜ್ಜೆ ವಿಧೇಯತೆ. ಯಾವಾಗಲೂ ಮನಸ್ಸಿನಲ್ಲಿ, ಬುದ್ಧಿಯಲ್ಲಿ, ಸಂಕಲ್ಪದಲ್ಲಿ ತಂದೆಯ ವಿಶ್ವಾಸ ದ್ರೋಹಿ(ಅವಿಧೇಯ) ಆಗಬಾರದು. ವಿಧೇಯನ ಅರ್ಥ- ಸದಾ ಒಬ್ಬ ತಂದೆಯ ಹೊರತು ಮತ್ತ್ಯಾರು ಇಲ್ಲ. ಸಂಕಲ್ಪದಲ್ಲಿ ಕೂಡ ದೇಹ, ದೇಹ ಸಂಬಂಧ, ದೇಹದ ಪದಾರ್ಥಗಳು, ದೇಹಧಾರಿ ವ್ಯಕ್ತಿಗಳು ಆಕರ್ಷಿಸಬಾರದು. ಇತರರ ಸ್ಮೃತಿಯನ್ನು ಮಾಡಿದರೆ ಅವರನ್ನು ವಿಧೇಯನೆಂದು ಹೇಳಲಾವುದಿಲ್ಲ. ಎಂದು ತಿಳಿಸುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಶಕ್ತಿಶಾಲಿಯಾಗಿ ತಂದೆ ಸಮಾನವಾಗಿರುವ ಸದಾ ವಿಜಯಿ ಭವ! ಎಂಬ ವರದಾನದ ವರದಾನಿ.

2. ನಾನು ಯಥಾರ್ಥ ಯೋಗದಿಂದ ತಂದೆಯ ಸಹಯೋಗವನ್ನು ಅನುಭವ ಮಾಡಿಕೊಳ್ಳುವ ಸ್ನೇಹಿ.

3. ಶಕ್ತಿಶಾಲಿ ಸಮಾನ ಮಗುವಾದ ನಾನು ಸದಾ ಯೋಗಯುಕ್ತವಾಗಿ ಸಹಯೋಗದ ಅನುಭವ ಮಾಡಿಕೊಳ್ಳುತ್ತಾ ಸಹಜವಾಗಿ ವಿಜಯಿಯಾಗಿದ್ದೇನೆ.

4. ನಾನು ತಂದೆಯು ವಾರಸತ್ವವಾಗಿ(ಆಸ್ತಿ) ಕೊಟ್ಟಿರುವ ಸರ್ವ ಶಕ್ತಿಗಳ ಅಧಿಕಾರವನ್ನು ಸಮಯದನುಸಾರ ಕಾರ್ಯದಲ್ಲಿ ಉಪಯೋಗಿಸಿ ಮೊದಲ ನಂಬರ್ ಪಡೆದಿದ್ದೇನೆ.

5. ನಾನು ಬ್ರಹ್ಮಾತಂದೆಯನ್ನು ಅನುಸರಿಸುತ್ತಾ ಸದಾ ತಂದೆ, ಶಿಕ್ಷಕ ಮತ್ತು ಸದ್ಗುರುವಿನ ಆದೇಶ ಪಾಲಕನಾಗಿದ್ದೇನೆ.

6. ನಾನು ಶಿವತಂದೆಯ ಆದೇಶದನುಸಾರ ಸರ್ವ ಖಜಾನೆಗಳ (ಜ್ಞಾನ, ಶಕ್ತಿ, ಗುಣಗಳು, ಶ್ರೇಷ್ಠ ಸಮಯ, ಸಂಕಲ್ಪಗಳು) ವಾರಸತ್ವದಿಂದ ಸಂಪನ್ನವಾಗಿ ಎಲ್ಲರನ್ನು ಸಂಪನ್ನವಾಗಿ ತಯಾರು ಮಾಡಿದ್ದೇನೆ.

7. ನಾನು ಜ್ಞಾನಖಜಾನೆ, ಸ್ಮೃತಿಶಕ್ತಿ ಮತ್ತು ಸಹನಶೀಲತೆಯ ಗುಣ ಸ್ವರೂಪ ಹೀಗೆ ಎಲ್ಲಾ ಖಜಾನೆಗಳನ್ನು ಬ್ರಹ್ಮಾ ತಂದೆಯ ಸಮಾನವಾಗಿ ಕೊನೆಯ ಸಮಯದವರೆಗೂ ಸೇವೆಯಲ್ಲಿ ಪ್ರತ್ಯಕ್ಷವಾಗಿ ಉಪಯೋಗಿಸಿರುವ ನಂಬರ್‌ವನ್ ಆದೇಶ ಪಾಲಕನಾಗಿದ್ದೇನೆ.

8. ನಾನು ಶಿವ ತಂದೆಯ ಆದೇಶದನುಸಾರ ಪ್ರತಿಯೊಂದು ಶ್ವಾಸ, ಸಂಕಲ್ಪ, ಕ್ಷಣ ಕೂಡ ವ್ಯರ್ಥ ಮಾಡದೇ ದಿನವಿಡೀ ಈ ಆದೇಶವನ್ನು ಬ್ರಹ್ಮಾ ತಂದೆಯ ಸಮಾನವಾಗಿ ಪ್ರತ್ಯಕ್ಷದಲ್ಲಿ ತಂದಿದ್ದೇನೆ

9. ನಾನು ಮೂರನೇ ಹೆಜ್ಜೆಯಾದ ಸದಾ ಚಿತ್ತ(ಆಗಲಿ) ಪ್ರಭು ಎಂಬುದರಲ್ಲಿ ಕೂಡ ಬ್ರಹ್ಮ ತಂದೆಯನ್ನು ಅನುಸರಿಸುತ್ತಾ ಪ್ರೀತಿಯ ಪ್ರತ್ಯಕ್ಷ ಪ್ರಮಾಣವನ್ನು ತೋರಿಸಿದ್ದೇನೆ.

10. ನಾನು ಸ್ಥಿತಿಯಲ್ಲಿ, ಸೇವೆಯಲ್ಲಿ, ಕರ್ಮ ಅರ್ಥಾತ್ ಸಂಭಂಧ ಸಂಪರ್ಕಗಳಲ್ಲಿ ಮೂರರಲ್ಲಿಯೂ ಸದಾ ತಂದೆಯನ್ನು ಅನುಸರಿಸುತ್ತಿದ್ದೇನೆ.

11. ನಾನು ಸದಾ ಗಮನವಿಡುವ ಮತ್ತು ಉತ್ಸಾಹ ಉಲ್ಲಾಸಗಳಲ್ಲಿರುವ ಪುರುಷಾರ್ಥ ಮಾಡುತ್ತಿದ್ದೇನೆ.

12. ನಾನು ನನ್ನ ದಿನಚರಿಯನ್ನು ಬೆಹದ್ ವೈರಾಗ್ಯವೃತ್ತಿ ಇರುವ ಹಾಗೆ ತಯಾರು ಮಾಡಿಕೊಂಡಿರುವ ಬೇಹದ್ ವೈರಾಗಿ.

13. ನಾನು ನಡೆದಾಡುತ್ತಾ-ಸುತ್ತಾಡುತ್ತಾ ಎಲ್ಲರಿಗೂ ಫರಿಶ್ತೆಯಾಗಿ ಕಾಣಿಸಿದ್ದೇನೆ.

14. ನನ್ನ ಮಾತು, ಚಲನೆ ಜೀವನ ವಿಧಾನ ಎಲ್ಲದರಲ್ಲೂ ನಾನು ಫರಿಶ್ತಾ ಆಗಿದ್ದೇನೆ.

15. ನಾನು ಸಂಬಂಧ ಸಂಪರ್ಕಗಳಲ್ಲಿ, ಸ್ಥಿತಿಯಲ್ಲಿ ಹಗುರವಾಗಿದ್ದೇನೆ. (ದಿನಚರಿಯಲ್ಲಿ ಅಲ್ಲ)

16. ನಾನು ಸ್ನೇಹಕ್ಕೆ ಪ್ರಮಾಣವನ್ನು ಕೊಟ್ಟು ಮಾಯೆಯಿಂದ ವಾಹ್ ವಿಜಯಿ ವಾಹ್ ಎನಿಸಿಕೊಂಡು ಪ್ರಕೃತಿಯಿಂದ ಕೂಡ ಚಪ್ಪಾಳೆಯನ್ನು ಪಡೆದಿದ್ದೇನೆ.

17. ನಾನು ಆದೇಶ ಪಾಲಕ ಎಂಬ ಹೆಜ್ಜೆಯನ್ನು ಪ್ರತ್ಯಕ್ಷದಲ್ಲಿ ತಂದು ತಂದೆಗೆ ನಂಬರ್‌ವನ್ ಭೋಗ್ ಇಟ್ಟಿದ್ದೇನೆ.

18. ನಾನು ಪದಾರ್ಥಗಳು, ಸಾಧನಗಳು, ವ್ಯಕ್ತಿ (ಯಾವುದಾದರೂ ಗುಣ, ಒಳ್ಳೆಯ ಸಂಸ್ಕಾರಗಳು), ವೈಭವಕ್ಕೆ ಆಕರ್ಷಣೆಯಾಗದ ವಿಧೇಯ ವಿದ್ಯಾರ್ಥಿ.

19. ನಾನು ಸ್ವಯಂನ ಪ್ರತಿ ಬೇಹದ್ ವೈರಾಗ್ಯ ವೃತಿಯಿಂದ ಇರುತ್ತಾ ಸೇವೆಗಾಗಿ ಸಾಧನಗಳನ್ನು ಕಾರ್ಯದಲ್ಲಿ ಉಪಯೋಗಿಸಿದ್ದೇನೆ.